ಕಾಡಿಗೆ ಕಣ್ಣು

**ಕಲೀಮ್ ಉಲ್ಲಾ**



# ತಡೋಬ ಎಂಬ ಹುಲಿಜಾಡು

> ಸೋನಂ ಹುಲಿ ಮೂರನೆಯ ಬಾರಿಗೆ ಮಕ್ಕಳಿಗೆ ಜನ್ಮ ನೀಡಿದ್ದಳು. ಹಾಲು ಕುಡಿಯುವ ಹಂತದ ತನ್ನ ನಾಲ್ಕು ಮಕ್ಕಳನ್ನು ಬಿಟ್ಟು ತನ್ನ ಗಡಿಯನ್ನು ಭದ್ರಗೊಳಿಸಲು ಆಕೆ ಹೊರಟಿದ್ದಾಳೆಂದು ಸ್ಪಷ್ಟ ಸೂಚನೆ ಸಿಕ್ಕಿತ್ತು. ಯಥಾ ಪ್ರಕಾರ ಆಕೆ ಬರಬಹುದಾದ ನಿಗದಿತ ಜಾಗೆಗಳಲ್ಲಿ ಹೋಗಿ ಕಾದೆವು. ಪೊದೆಗಳು ಸಣ್ಣಗೆ ಅಲುಗಾಡುವುದು ಕಾಣುತ್ತಿತ್ತು. ನಾವು ನೋಡಬಯಸಿದ ಸೋನಂ ರಸ್ತೆಗೆ ಬಂದು ನಿಂತಳು.

ಮೊಹರ್ಲಿ ಎಂಬ ಹಳ್ಳಿಯಲ್ಲಿ ರಾತ್ರಿ ಊಟ ಮುಗಿಸಿ ತಿರುಗಾಡಿ ಬರಲು ಹೊರಟೆವು. ಮೂರು ದಿನದಿಂದ ತಡೋಬ ಅಭಯಾರಣ್ಯದಲ್ಲಿ ಪೂರ್ಣ ಪ್ರಮಾಣದ ಹುಲಿ ಸಿಗದೆ ಒಂಥರ ನಿರಾಶೆ ಕೂಡ ಆಗಿತ್ತು. ಹೆಚ್ಚು ಹುಲಿಗಳು ಸಿಗುವ ಜಾಗ ಎಂದು ಆಸೆ ಹೊದ್ದುಕೊಂಡು ಇಲ್ಲಿಗೆ ಬಂದಿದ್ದೆವು. ಈ ಅರಣ್ಯದಲ್ಲಿ ಜಾಸ್ತಿ ಹುಲಿಗಳು ಇರುವುದು ನಿಜವಾದರೂ, ನಮ್ಮ ಗ್ರಹಚಾರಕ್ಕೆ ಒಂದೂ ನೆಟ್ಟಗೆ ಸಿಕ್ಕಿರಲಿಲ್ಲ. ಮೊದಲ ದಿನ ಒಂದು ಹುಲಿ ಸಿಕ್ಕಿತಾದರೂ ಅದೂ ತುಂಬಾ ದೂರದಲ್ಲಿತ್ತು. ತಲೆ ಮಾತ್ರ ಕಾಣುತ್ತಿತ್ತು. ಆ ಹುಲಿ ನಮಗೆ ಬೆನ್ನು ಹಾಕಿ ಮುಖವನ್ನು ವಿರುದ್ಧ ದಿಕ್ಕಿಗೆ ತಿರುಗಿಸಿಕೊಂಡು ಕೂತಿತ್ತು. ಸಫಾರಿಯ ಹುಡುಗ, 'ನಿನ್ನೆಯ ಹೊಡೆದಾಟದಲ್ಲಿ ಅದಕ್ಕೆ ಕೊಂಚ ಏಟಾಗಿದೆ' ಎಂದ.

ಭರ್ಜರಿ ಗಾತ್ರದ ಆ ವ್ಯಾಘ್ರದ ಹೆಸರು ಯುವರಾಜ ಎಂದು. ಆಗಾಗ ತನ್ನ ಗಾಯದ ಕಾಲು ನೆಕ್ಕುತ್ತಾ, ಅದು ಕೂತಲ್ಲೇ ತೂಕಡಿಸುತ್ತಿತ್ತು. ಎರಡು ಗಂಡು ಹುಲಿಗಳ ನಡುವೆ ಆಗಾಗ ಕಾಡಿನಲ್ಲಿ ಪರಸ್ಪರ ಕಾದಾಟ ನಡೆಯುವುದು ಮಾಮೂಲಿ ವಿಷಯ. ಇದನ್ನು ಟೆರಿಟರಿ ಫೈಟ್ ಎನ್ನುತ್ತಾರೆ. ತಾನು ಗುರುತಿಸಿಕೊಂಡ ಸರಹದ್ದಿನ ಜಾಗಕ್ಕೆ ಮತ್ತೊಂದು ಹುಲಿ ಪ್ರವೇಶ ಮಾಡಿದರೆ ನಡೆಯುವ ಮಾರಾಮಾರಿಯಿದು. ತನ್ನ ಸೀಮೆಗೆ ಮತ್ತೊಂದು ಹುಲಿ ಅತಿಕ್ರಮಣ ಮಾಡಬಾರದೆಂದು ಗುರುತಿಗೆ ಹುಲಿ ಅನೇಕ ಗುರುತಿಸಲ್ಪಟ್ಟ ಮರಗಳ ತೊಗಟೆ ಕೆರೆದು ಅದರ ಮೇಲೆ ತನ್ನ ಮೂತ್ರವನ್ನು ಸಿಂಪಡಿಸುತ್ತದೆ. ಇದನ್ನು ಗಮನಿಸಿಯೂ ಸೀಮೋಲ್ಲಂಘನೆ ಮಾಡಿ ಬರುವ ಹುಲಿಯ ಜೊತೆ ಜಗಳ ನಡೆಯುತ್ತದೆ. ಅಂತಹ ಗುದ್ದಾಟಗಳಲ್ಲಿ ಯಾವುದಾದರೂ ಒಂದು ಹುಲಿ ತೀವ್ರವಾಗಿ ಗಾಯಗೊಳ್ಳುವ ಸಾಧ್ಯತೆ ಹೆಚ್ಚಾಗಿರುತ್ತದೆ. ಕೆಲವೊಮ್ಮೆ ನಸೀಬು ಕೈ ಕೊಟ್ಟರೆ ಶಕ್ತಿವಂತ ವ್ಯಾಘ್ರದ ಕೈಯಿಂದ ಮತ್ತೊಂದು ಖಚಿತವಾಗಿ ಸಾಯುತ್ತದೆ. ತೀರಾ ಇತ್ತೀಚೆಗೆ ಇದೇ ಅರಣ್ಯದಲ್ಲಿ ಭಜರಂಗ್ ಎನ್ನುವ ಗಂಡು ಹುಲಿಯನ್ನು ಚೋಟಾಮಟ್ಕಾ ಎಂಬ ಮತ್ತೊಂದು ಗಂಡು ಹುಲಿ ಮುಖಮೂತಿ ನೋಡದೆ ಹೊಡೆದು ಕೊಂದು ಹಾಕಿತ್ತು.

ಮೊದಲ ದಿನ ನಮಗೆ ಸಿಕ್ಕಿದ್ದ ತೆರೆಮರೆಯ ಹುಲಿ ಪಕ್ಕಾ ಸೋಂಬೇರಿ